# KARNATAKA ICSE SCHOOLS ASSOCIATION

PREPARATORY EXAMINATION - JANUARY 2020

Class: X | Subject: KANNADA II Language | Max. Marks: 80

Duration: Three Hours | Date : 17. 01 . 2020

**Instructions:**

***Answers to this Paper must be written on the paper provided separately.***

*You will **not** be allowed to write during the first 15 minutes.*

*This time is to be spent in reading the question paper.*

***The time given at the head of this Paper is the time allowed for writing the answers***

---

*This paper comprises of two Sections: **Section A and Section B.***

*Attempt **all** the questions from **Section A.***

*Attempt four questions from **Section B**, answering at least one question each from the **two** books you have studied and **any two** other questions.*

*The intended marks for questions or parts of questions are given in bracket [ ].*

---

## Section – A [40 Marks]

*Attempt **all** questions.*

**Question 1**

Write a short composition in **Kannada** of approximately **250** words on any **one** of the following topics: **[15]**

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ನಿಮಗೆ ಬೇಕಾದ ಒಂದು ವಿಷಯವನ್ನು ಆರಿಸಿಕೊಂಡು ಸುಮಾರು 250 ಪದಗಳ ಸಂಕ್ಷಿಪ್ತ ಪ್ರಬಂಧ ಬರೆಯಿರಿ:-

1. ಇತ್ತೀಚಿಗೆ ಯುವಕರಲ್ಲಿ 'ವಿದೇಶೀವ್ಯಾಮೋಹ' ಹೆಚ್ಚಾಗುತ್ತಿದೆ. ಇದರಿಂದ ದೇಶಕ್ಕೆ ಆಗುವ ಅನುಕೂಲ ಮತ್ತು ಅನಾನುಕೂಲಗಳನ್ನು ಕುರಿತು ಬರೆಯಿರಿ.

2. ಜಲನಿಧಿ ಜೀವ ನಿಧಿಯೂ ಹೌದು, ಆದರೆ ಒಮ್ಮೊಮ್ಮೆ ಅತಿವೃಷ್ಟಿಯಿಂದಾಗಿ ನದಿಗಳಲ್ಲಿ ಹರಿಯುವ ಮಟ್ಟ ಮೀರಿ ಪ್ರವಾಹಗಳುಂಟಾಗುತ್ತವೆ. ಇಂತಹ ಪ್ರವಾಹಗಳಲ್ಲಿ ಜೀವಹಾನಿ ಪ್ರಾಣಹಾನಿ ಉಂಟಾಗುತ್ತವೆ ನೀವು ಗಮನಿಸಿದಂತೆ ಯಾವುದಾದರೊಂದು ನದಿಯ ಪ್ರವಾಹ ಅದರಿಂದ ಉಂಟಾದ ಅನಾಹುತಗಳು, ಸಾವು - ನೋವುಗಳ ಬಗ್ಗೆ ಪ್ರಬಂಧ ಬರೆಯಿರಿ.

3. 'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿನೋಡು' ಇದೊಂದು ನಾಣ್ಣುಡಿ ಇದರ ಅರ್ಥವೇನು? ಇದರಿಂದ ನಾವು ಕಲಿಯಬೇಕಾದ ಅಂಶಗಳೇನು? ಉದಾಹರಣೆಯ ಸಹಿತವಾಗಿ ವಿವರಿಸಿ.

4. "ಮಾನವನ ಸಂಬಂಧಗಳಲ್ಲಿ ಪ್ರೀತಿ - ಸೌಹಾರ್ದತೆ ಬೆಳೆಯಲು ಹಬ್ಬಗಳು ಹೇಗೆ ಸಹಕಾರಿಯಾಗಿದೆ" ಚರ್ಚಿಸಿ.



Scanned by CamScanner

5. ಕೆಳಗೆ ಕೊಟ್ಟಿರುವ ಚಿತ್ರವನ್ನು ಜಾಗರೂಕವಾಗಿ ಅಧ್ಯಯನ ಮಾಡಿ. ಈ ಚಿತ್ರವನ್ನು ಆಧರಿಸಿ ಒಂದು ಕಥೆ ಅಥವಾ ಪ್ರಬಂಧವನ್ನು ಬರೆಯಿರಿ, ಚಿತ್ರಕ್ಕೂ ನಿಮ್ಮ ವರ್ಣನೆಗೂ ಸ್ಪಷ್ಟವಾದ ಸಂಬಂಧವಿರಬೇಕು




**Question 2**

Write a letter in **Kannada** in approximately **120** words on any **one** of the topics given below:- [7]

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಆರಿಸಿಕೊಂಡು ಸುಮಾರು **120** ಪದಗಳಲ್ಲಿ ಒಂದು ಪತ್ರವನ್ನು ಬರೆಯಿರಿ:-

1. ಸರ್ಕಾರ ಇತ್ತೀಚಿಗೆ ಪ್ಲಾಸ್ಟಿಕ್ ನಿಷೇಧಗೊಳಿಸಿದೆ ಇದರಿಂದ ಪರಿಸರಕ್ಕೆ ಯಾವ ರೀತಿಯ ಉಪಯೋಗಗಳು ಆಗುತ್ತವೆ ಎಂಬುದನ್ನು ವಿವರಿಸಿ ನಿಮ್ಮ ತಾಯಿ ಅವರಿಗೆ ಒಂದು ಪತ್ರ ಬರೆಯಿರಿ.

ಅಥವಾ

2. ಖಾಸಗಿ ವಾಹಿನಿಯಲ್ಲಿ ಪ್ರಸಾರವಾಗುವ 'ಕನ್ನಡದಕೋಟ್ಯಾಧಿಪತಿ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅನುಮತಿ ಕೋರಿ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ.



Scanned by CamScanner

**Question: 3**

**Read the following passage carefully and answer in Kannada the questions that follow:-**

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಗೆ ಉತ್ತರ ವರೆಯಿರಿ:-

ತಂದೆ ಭಾರೀ ಶ್ರೀಮಂತ, ಬಹುದೊಡ್ಡ ವ್ಯಾಪಾರಿ ಮಗ ಕಾಲೇಜಿನಲ್ಲಿ ಓದುತ್ತಿದ್ದ ಒಬ್ಬನೇ ಮಗನಾದ್ದರಿಂದ ಅವನು ಕೇಳಿದ್ದೆಲ್ಲ ದೊರಕುತ್ತಿತ್ತು. ತರುಣ ಕೂಡ ಚೆನ್ನಾಗಿಯೇ ಓದಿ ತನ್ನ ಶಿಕ್ಷಣದ ಕೊನೆಯ ಹಂತಕ್ಕೆ ಬಂದಿದ್ದ ಒಂದು ದಿನ ಸಂಜೆ ಮಾತನಾಡುತ್ತಿರುವಾಗ ತಂದೆ ಕೇಳಿದರು, "ಮಗೂ, ಇನ್ನು ಕೆಲವೇ ತಿಂಗಳುಗಳಲ್ಲಿ ನೀನು ಶಿಕ್ಷಣ ಮುಗಿಸುತ್ತೀಯಾ, ಮುಂದೆ ಏನು ಮಾಡಬೇಕೆಂದು ಯೋಚಿಸಿರುವೆ?" ಮಗ ಹೇಳಿದ, "ಅಪ್ಪಾ, ನಾನು ನಿಮ್ಮಿಂದ ವ್ಯಾಪಾರ ಹೇಗೆ ಮಾಡುವುದು ಎಂಬುದನ್ನು ಕಲಿತಿದ್ದೇನೆ. ಶಿಕ್ಷಣದಿಂದ ಹಲವು ಹೊಸ ವಿಷಯಗಳ ಪರಿಚಯವೂ ಆಗಿದೆ. ನಾನೇ ಒಂದು ಹೊಸ ವ್ಯಾಪಾರವನ್ನು ಪ್ರಾರಂಭಿಸಬೇಕೆಂದಿದ್ದೇನೆ." "ಸಂತೋಷ ಮಗೂ ಹಾಗೇ ಮಾಡು ಆಮೇಲೆ ನೀನು ಕಾಲೇಜು ಶಿಕ್ಷಣ ಮುಗಿಸಿದ್ದಕ್ಕೆ ನಿನಗೇನಾದರೂ ಕೊಡುಗೆ ಕೊಡಬೇಕೆಂದಿದ್ದೇನೆ. ನಿನಗೆ ಏನು ಬೇಕು? ಹೇಳು" ಎಂದರು ತಂದೆ , ಮಗ, "ಅಪ್ಪಾ, ನಿಮಗೆ ಗೊತ್ತಿದೆ, ನನಗೆ ಕಾರುಗಳ ಹುಚ್ಚು, ಈಗೊಂದು ಹೊಸ ಮಾದರಿಯ ಕಾರು ಬಿಡುಗಡೆಯಾಗಿದೆ. ಅದಿದ್ದರೆ ಚೆನ್ನಾಗಿತ್ತು" ಎಂದನು. "ಹುಚ್ಚಪ್ಪಾ, ಕಾರು ಏನು ಮಾಡುತ್ತೀ?" ಎಂದು ನಕ್ಕು ತಂದೆ ಎದ್ದು ಹೋದರು.

ಪರೀಕ್ಷೆ ಮುಗಿದು, ಫಲಿತಾಂಶವೂ ಬಂತು ತರುಣ ತುಂಬ ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾನೆ. ಸಂತೋಷದಿಂದ ತಂದೆಗೆ ಹೇಳಲು ಅವರ ಕೊಠಡಿಗೆ ಹೋದ ವಿಷಯ ತಿಳಿದ ತಂದೆಗೆ ತುಂಬಾ ಸಂತೋಷವಾಗಿ ಕುಳಿತ ಸ್ಥಳದಿಂದ ಎದ್ದು, ತಮ್ಮ ಮೇಜಿನ ಕಡೆಗೆ ಹೋಗಿ ಅದರ ಮೇಲಿದ್ದ ಒಂದು ಆಕರ್ಷಕವಾಗಿ ಕಟ್ಟಲಾಗಿದ್ದ ಕಟ್ಟನ್ನು ತೆಗೆದುಕೊಂಡು ಮಗನಿಗೆ ಕೊಟ್ಟರು, "ಇದು ನಿನ್ನ ಸಾಧನೆಗೆ ನನ್ನ ಬಹುಮಾನ" ಎಂದರು. ತರುಣ ಆತುರದಿಂದ, ಕುತೂಹಲದಿಂದ ಆ ಕಟ್ಟನ್ನು ಬಿಚ್ಚಿ ನೋಡಿದ. ಅದೊಂದು ಭಗವದ್ಗೀತೆಯ ಸುಂದರವಾದ ಪ್ರತಿ ಮಗನ ಮನಸ್ಸು ಕುಸಿದು ಹೋಯಿತು. ಅಪ್ಪ ಹೊಸ ಕಾರು ಕೊಡಿಸುತ್ತಾರೆ ಎಂದು ಕೊಂಡಿದ್ದರೆ, ಭಗವದ್ಗೀತೆಯನ್ನು ಕೊಟ್ಟಿದಾರೆ. ಈ ಮುದುಕರಿಗೆ ಹುಡುಗರ ಮನಸ್ಸು ಹೇಗೆ ಅರ್ಥವಾಗಬೇಕು? ಅವನ ಕೋಪ ಮಿತಿಮೀರಿ ಹೋಯಿತು. "ಅಪ್ಪ ನಾನು ನಿಮಗೆ ಎಂದೂ ಅರ್ಥವಾಗುವುದಿಲ್ಲ. ನಾನು ಕೇಳಿದ್ದನ್ನು ಕೊಡಿಸದೇ ನಿಮಗೆ ಬೇಕಾದ್ದನ್ನೇ ಕೊಡುತ್ತೀರಿ. ಇದು ನನಗೆ ಬೇಡ, ಇಷ್ಟು ದುಡ್ಡು ಇಟ್ಟುಕೊಂಡು ಏನು ಮಾಡುತ್ತೀರಿ. ಇಂದಿನಿಂದ ನಿಮ್ಮ ಒಂದು ದುಡ್ಡೂ ನನಗೆ ಬೇಡ." ಎಂದು ಬಡಬಡನೇ ಒದರಿ, ಮನೆಯಿ0ದ ನಡೆದೇ ಬಿಟ್ಟ ತಂದೆ ಬಾಯಿಬಿಟ್ಟುಕೊಂಡು ನೋಡುತ್ತಲೇ ಇದ್ದರು.

ಮನೆಬಿಟ್ಟು ಹೊರಗೆ ನಡೆದ ಹುಡುಗ ಮತ್ತೆ ತಂದೆಯ ಮನೆಯಲ್ಲಿ ಕಾಲಿಡಲಿಲ್ಲ ತಂದೆ ಅನೇಕ ಬಾರಿ ಅವನನ್ನು ಸಂಪರ್ಕಿಸಲು ಪ್ರಯತ್ನಪಟ್ಟರೂ ಆತ ಅದನ್ನು ತಿರಸ್ಕರಿಸಿ ಬಿಟ್ಟ ತನ್ನದೇ ವ್ಯಾಪಾರವನ್ನು ಬೆಳೆಸಿದ, ಯಶಸ್ವಿಯಾದ ಎಷ್ಟೋ ವರ್ಷಗಳು ಕಳೆದವು ಜೀವನದಲ್ಲಿ ಪೆಟ್ಟು ಬಿದ್ದಾಗಲೆಲ್ಲ ತಂದೆಯ ನೆನಪಾಗುತ್ತಿತ್ತು. ಅವರ ಹಿತವಚನಗಳು ಸಹಾಯಕವಾಗುತ್ತಿದ್ದವು. ಒಂದು ದಿನ ತಂದೆಯ ಮನೆಯಿಂದ ಸೇವಕ ಓಡಿ ಬಂದು ತಂದೆ ಆಗ ತಾನೇ ತೀರಿಹೋದ ಸಮಾಚಾರ ತಿಳಿಸಿದ ತರುಣ ಗಾಬರಿಯಿಂದ ತಂದೆಯ ಮನೆಗೆ ಓಡಿದ. ಅಪರಾಧಿ ಭಾವದಿಂದ ಕೊರಗಿ ಹೋದ ಎಲ್ಲ ಕ್ರಿಯೆಗಳನ್ನು ಮುಗಿಸಿದ ಮೇಲೆ ತಂದೆಯ ಕೊಠಡಿಯಲ್ಲಿ ಕುಳಿತು ಕಾಗದ ಪತ್ರಗಳನ್ನು ಜೋಡಿಸಿ ಇಡುತ್ತಿದ್ದ ಆಗ ಠಪ್ಪೆಂದು ಒಂದು ಲಕೋಟೆ ಕೆಳಗೆ ಬಿತ್ತು. ಅದನ್ನು ತೆರೆದಿರಲಿಲ್ಲ. ಬಿಚ್ಚಿ ನೋಡಿದರೆ, ಅದು ಕಾರು ಕಂಪನಿಯ ರಸೀದಿ. ತಂದೆ ಇವನ ಹೊಸ ಕಾರಿಗೆ ಪೂರ್ಣ ದುಡ್ಡು ಕಟ್ಟಿ



Scanned by CamScanner

ಪಡೆದ ರಸೀದಿ ಅದನ್ನು ಆ ದಿನವೇ ತಂದು ಇಟ್ಟಿದ್ದರು. ಮಗ ದುಃಖದಿಂದ ಬಿಕ್ಕಿ ಬಿಕ್ಕಿ ಅತ್ತ ತಂದೆ ತನಗೆ ಬೇಕಾದ ಕಾರನ್ನು ಕೊಂಡು ಅದರ ರಸೀದಿಯನ್ನು ಭಗವದ್ಗೀತೆಯ ಪುಸ್ತಕದಲ್ಲಿಟ್ಟಿದ್ದರು. ಅದನ್ನು ಗಮನಿಸುವಷ್ಟು ವ್ಯವಧಾನ ತನಗಿಲ್ಲವಾಯ್ತಲ್ಲ, ತಾನು ಕೋಪದಿಂದ ಮನೆಬಿಟ್ಟು ಹೋಗಿ ಅವರನ್ನು ದುಃಖಕ್ಕೆ ಗುರಿಮಾಡಿದೆನಲ್ಲ ಎಂದು ಕೊರಗಿದ ಅದರೆ ಕಾಲ ಮಿಂಚಿ ಹೋಗಿದೆ ನಮಗೂ ದೇವರು ಬೇಕಾದದ್ದನ್ನು ಕೊಡುತ್ತಾನೆ. ಆದರೆ ನಾವು ಅಪೇಕ್ಷಿಸಿದ ರೂಪದಲ್ಲಿ ಇರಲಿಕ್ಕಿಲ್ಲ. ಅವನು ನೀಡಿದ್ದನ್ನು ಅರ್ಥ ಮಾಡಿಕೊಳ್ಳುವಷ್ಟು ತಾಳ್ಮೆ ನಮಗಿರಬೇಕು.

**ಪ್ರಶ್ನೆಗಳು:-**

1. ಬಲು ದೊಡ್ಡ ವ್ಯಾಪಾರಿಯಾಗಿದ್ದ ತಂದೆಯು ಒಂದು ದಿನ ಸಂಜೆ ಮಗನ ಹತ್ತಿರ ಏನೆಂದುಕೇಳಿದರು? ಅದಕ್ಕೆ ಮಗನು ಏನೆಂದು ಉತ್ತರಿಸಿದನು? [2]
2. ಅಪ್ಪನಿಂದ ಮಗನು ಯಾವ ಕೊಡುಗೆಗಾಗಿ ಆಸೆಪಟ್ಟಿದ್ದನು? ಏಕೆ? [2]
3. ಫಲಿತಾಂಶ ತಿಳಿದ ತಂದೆಯವರು ಏನುಮಾಡಿದರು? ಅದಕ್ಕೆ ಮಗನ ಕೋಪ ಮಿತಿ ಮೀರಲು ಕಾರಣವೇನು? [2]
4. ಮಗನು ಕೋಪದಿಂದ ಮುಂದೇನು ಮಾಡಿದ? ಸೇವಕ ಬಂದು ಏನೆಂದು ಹೇಳಿದನು? [2]
5. ಈ ಗದ್ಯಭಾಗಕ್ಕೆ ನಿಮ್ಮ ಶೀರ್ಷಿಕೆ ಏನು? ಈ ಗದ್ಯಾಂಶವು ನಿಮಗೆ ನೀಡಿದ ಸಂದೇಶವೇನು? [2]

**Question 4**

Answer the following questions according to the instruction given:-

ಕೆಳಗಿನ ಪ್ರಶ್ನೆಗಳಿಗೆ ಸೂಚನೆಗಳಿಗನುಸಾರವಾಗಿ ಉತ್ತರ ಬರೆಯಿರಿ:-

1. ಯಾವುದಾದರೂ ಎರಡು ಪದಗಳಿಗೆ ಸಮನಾರ್ಥಕ ಪದಗಳನ್ನು ಬರೆಯಿರಿ: [1]
   ಕಾಡು ಕಂದ ಧನ ಭೂಮಿ
2. ಯಾವುದಾದರೂ ಎರಡು ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ [1]
   ಮೌಲ್ಯ ಸುರ ಆಮದು ಭಾರ
3. ಯಾವುದಾದರೂ ಎರಡು ಪದಗಳನ್ನು ನಿಮ್ಮ ಸ್ವಂತವಾಕ್ಯಗಳಲ್ಲಿ ಬಳಸಿ [1]

   ಪರಂಪರೆ ಜೋಪಾನ ನೆಮ್ಮದಿ ಸ್ವರ್ಗ



Scanned by CamScanner

4. ಈ ವಾಕ್ಯವನ್ನು ಬಹುವಚನದಲ್ಲಿ ಬರೆಯಿರಿ [1]

ಹಸು ಭತ್ತದ ಗದ್ದೆಗೆ ನುಗ್ಗಿ ಬೆಳೆಯನ್ನು ನಾಶಮಾಡಿತು

5. ಈ ವಾಕ್ಯವನ್ನು ಅನ್ಯಲಿಂಗಕ್ಕೆ ಬದಲಾಸಿ ಬರೆಯಿರಿ [1]

ಅಣ್ಣ ಸಾಮಾನುಗಳನ್ನು ತರಲು ಅಂಗಡಿಗೆ ಹೋದನು

6. ಈ ವಾಕ್ಯವನ್ನು ವರ್ತಮಾನ ಕಾಲದಲ್ಲಿ ಬರೆಯಿರಿ [1]

ಅವರು ಮೈಸೂರಿಗೆ ಹೋಗುವರು

7. ಈ ಗಾದೆಮಾತನ್ನು ಪೂರ್ಣಗೊಳಿಸಿ [1]

ಅಜ್ಜಿಯಿಲ್ಲದ ಮನೆ ____________________

8. ಬಿಟ್ಟಸ್ಥಳದಲ್ಲಿ ಸೂಕ್ತ ವಿಭಕ್ತಿ ಪ್ರತ್ಯಯವನ್ನು ಬರೆಯಿರಿ: [1]

ನನ್ನ ಗೆಳತಿ ರಮ್ಯ ___________ ಹಾಡು ___________ ಚೆನ್ನಾಗಿ ಹಾಡುತ್ತಾಳೆ

**SECTION – B (40 Marks)**

*Attempt **four** questions from this Section.*
*You must answer at least **one** question from each of the **two** books you have studied and any **two** other questions.*

ಸಾಹಿತ್ಯ ಸಂಗಮ - ಸಣ್ಣ ಕಥೆಗಳು

**SAHITYA SANGAMA – SHORT STORIES**

**Question 5**

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

ಒಂದು ದಿನ ಅವನ ರಾಜ್ಯಕ್ಕೆ ಕಾಶ್ಮೀರದಿಂದ ಕೆಲವು ಜನ ಕೇಸರಿ ಮಾರುವ ವ್ಯಾಪಾರಿಗಳು ಬಂದರು. ಅವರು ತಮ್ಮ ಜೊತೆ ಭಾರಿ ಮೊತ್ತದ ಕೇಸರಿ ಹೊತ್ತು ತಂದಿದ್ದರು

[ದೀಪಾವಳಿಯ ಮಹಿಮೆ - ಜನಪದರು]
[Deepavali Mahime – Janapadaru]



Scanned by CamScanner

**ಪ್ರಶ್ನೆಗಳು:-**

1. ವ್ಯಾಪಾರಿಗಳು ಯಾವರಾಜ್ಯಕ್ಕೆ ಬಂದಿದ್ದರು? ಅ ರಾಜ್ಯದ ಅರಸ ಯಾರು? [2]
2. ಸುಮಂಗಳೆ ರಾಜನ ಆಸ್ಥಾನಕ್ಕೆ ಹೋಗಲು ಕಾರಣವೇನು? ಯಾವ ಬೇಡಿಕೆಯನ್ನು ಇಟ್ಟಳು ? [2]
3. "ಮಹಾರಾಣಿಯ ವಜ್ರದ ಹಾರ ಕಳುವಾಗಿದೆ" [ ಸಂಧರ್ಭ ಸಹಿತ ವಿವರಿಸಿ] [3]
4. ಪ್ರತಾಪನು ತನ್ನ ರಾಜ್ಯವನ್ನು ಮರಳಿ ಹೇಗೆ ಪಡೆದನು? [3]

**Question: 6**

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

"ಇವರು ನನ್ನನ್ನೇ ಕುರಿತು ನೋಡುವಷ್ಟು ನಾನೇನು ಸುಂದರ ನಲ್ಲ-ವಲ್ಲಾ" ಎಂದು ಕೊಂಡು ಇನ್ನೂ ನಾಲ್ಕು ಹೆಜ್ಜೆ ಮುಂದಕ್ಕೆ ಹಾಕಿದೆ,

[ಗರುಡಗಂಬದ ದಾಸಯ್ಯ -  ಗೊರೂರು ರಾಮಸ್ವಾಮಿ ಅಯ್ಯಂಗಾರ್]
[Garudagambada Daasayya – Goruru Ramaswamy Iyengar]

**ಪ್ರಶ್ನೆಗಳು:-**

1. ಈ ಮಾತನ್ನು ಹೇಳಿದವರು ಯಾರು? ಅವರ ಪರಿಚಯ ಮಾಡಿಕೊಡಿ? [2]
2. ಶಂಕರಪ್ಪ ಗೊರೂರುಗೆ ಗರುಡಗಂಬ ಹೇಗೆ ಕೂಡಿಸಿದರು? [2]
3. ಕೃಷ್ಣಬಜಾರಿನಲ್ಲಿ ಜನರಲ್ಲಾ ಲೇಖಕರನ್ನು ನೋಡಿದ್ದು ಏಕೆ? ವಿವರಿಸಿ [3]
4. ಲೇಖಕರ ಸ್ನೇಹಿತ ಗಲ್ಲು ಶಿಕ್ಷೆಗೆ ಗುರಿಯಾದ ನಿರಪರಾಧಿಯಂತೆ ಮುಖ ಮಾಡಿಕೊಂಡು ಅವರಕಡೆ ನೋಡಲು ಕಾರಣವೇನು? ವಿವರಿಸಿ [3]

**Question 7**

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

ಮಾಧು ಬಾವೀಗೆ ಇಳಿದು ಮಗೂನ ಬದುಕಿಸಿದ ಅವನ ಧೈರ್ಯಾನ ನೋಡಿ ಸರಕಾರದವರು. ಅವನಿಗೆ ಒಂದು ಚಿನ್ನದ ಪದಕ ಕೊಟ್ಟರು

[ಟೊಳ್ಳು - ಗಟ್ಟಿ - ಟಿ . ಪಿ . ಕೈಲಾಸಂ]
[Tollu – Gatti – T . P . Kailasam]



Scanned by CamScanner

ಪ್ರಶ್ನೆಗಳು:-

1. ಅಧ್ಯಕ್ಷರು ಮಾಧುವಿಗೆ ಏನೆಂದು ಹೊಗಳಿದರು? [2]

2. ಮಾಧುವಿನ ಸ್ವಭಾವ ಪುಟ್ಟುವಿನದಕ್ಕಿಂತ ಹೇಗೆ ಭಿನ್ನವಾಗಿದೆ? [2]

3. ಭಾಗೀರಥಮ್ಮನಿಗೆ ತನ್ನ ಕಿರಿಯ ಮಗನ ಬಗ್ಗೆ ಇದ್ದಂತಹ ಭಾವನೆ ಏನು? ವಿವರಿಸಿ [3]

4. ಮಾಧು ತನ್ನ ಮನೆಯವರನ್ನು ಬೆಂಕಿಯಿಂದ ಹೇಗೆ ರಕ್ಷಿಸಿದ? ನಂತರ ಅವನ ಪರಿಸ್ಥಿತಿ ಹೇಗಿತ್ತು. [3]

ಸಾಹಿತ್ಯ ಸಂಗಮ [ಕವನಗಳು]
SAHITYA SANGAMA - POEMS

**Question 8**

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

ಒಡಲನಾವರಿಸಿದಂಗೋಪಾಂಗಸಂಕುಳದ
ನಡುವೆ ನಯನದ್ವಯಂಗಳು ಸಲೆ ನವಗ್ರಹ
ನಡುವೆ ಚಂದ್ರಾದಿತ್ಯರುರ್ವಿಯಂ ಪರ್ವಿ ಪಸರಿಸಿದ ನಾನಾ ನದಿಗಳ

[ವಸಿಷ್ಠ ವಿಶ್ವಾಮಿತ್ರರ ವಿವಾದ - ರಾಘವಾಂಕ]
[Vasishta Vishwaamitra Vivada – Raghavanka]

ಪ್ರಶ್ನೆಗಳು:-

1. 'ಷಟ್ಪದಿ'ಯಪ್ರವರ್ತಕಯಾರು? ಅವರ ಬಿರುದುಗಳು ಯಾವುವು? [2]

2. ವಿಶ್ವಾಮಿತ್ರ ಕೋಪಗೊಳ್ಳಲು ಕಾರಣಗಳೇನು? [2]

3. ದೇವೇಂದ್ರನ ಸಭೆಯಲ್ಲಿ ಕುಳಿತಿದ್ದ ವಸಿಷ್ಠ ವಿಶ್ವಾಮಿತ್ರರನ್ನುಕವಿಹೇಗೆ ವರ್ಣಿಸಿದ್ದಾನೆ? [3]

4. ಹರಿಶ್ಚಂದ್ರನು ಹುಸಿ ನುಡಿಯದೇ ಇದ್ದರೆ ವಿಶ್ವಾಮಿತ್ರ ಏನು ಮಾಡುವೆನೆಂದು ಪ್ರತಿ ಜ್ಞೆ ಮಾಡಿದನು? [3]



Scanned by CamScanner

**Question 9**

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

ಭೂಕಂದಾಯಕೆ ತೆರಿಗೆ ವಸೂಲಿಗೆ

ಶಿಸ್ತನು ತಂದಿಹ ನಾಯಕನು

ಭಾರತ ಚರಿತ್ರೆಯೊಳು ಸೇರಿಹನು

ಶಿಸ್ತಿನ ಶಿವಪ್ಪನಾಯಕನು

[ಕೆಳದಿಯ ಅರಸರ ಕಥೆ - ಲಾವಣಿ]
[Keladiya Arasara Kate – Laavani]

**ಪ್ರಶ್ನೆಗಳು:-**

1. ಕೆಳದಿಯ ಸಂಸ್ಥಾನವನ್ನು ಸ್ಥಾಪಿಸಿದವರು ಯಾರು? ಅವರು ಯಾವ ಕತ್ತಿಯನ್ನು ಬಳಸುತ್ತಿದ್ದರು? [2]
2. ಸದಾನಂದ ಶರ್ಮ ಅವರ ಕಾವ್ಯನಾಮವೇನು? ಅವರ ಪರಿಚಯ ಮಾಡಿಕೊಡಿ [2]
3. ಚೆನ್ನಮ್ಮನನ್ನು ರಕ್ಷಣೆ ಕೋರಿ ಬಂದ ರಾಜ ಯಾರು? ಅವನಿಗೆ ಚೆನ್ನಮ್ಮ ಹೇಗೆ ರಕ್ಷಣೆ ನೀಡಿದಳು? [3]
4. "ಭಾರತ ಚರಿತ್ರೆಯೊಳು ಸೇರಿಹನು ಶಿಸ್ತಿನ ಶಿವಪ್ಪನಾಯಕನು? [ಸಂದರ್ಭ] [3]

**Question: 10**

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

ಪುರದ ರಾಜ ಸತ್ತನವನಗೆ

ವರಕುಮಾರರಿಲ್ಲ ದಿರಲು

ಕರಿಯ ಕೈಗೆ ಕುಸುಮಮಾಲೆಯಿತ್ತು ಪುರದೊಳು

[ತಿರುಕನ ಕನಸು - ಮುಪ್ಪಿನ ಷಡಕ್ಷರಿ]
[Tirukana Kanasu – Muppina Shadakshari]



Scanned by CamScanner

**ಪ್ರಶ್ನೆಗಳು:-**

1. ತಿರುಕ ಎಲ್ಲಿ ಮಲಗಿದ್ದನು? ಅವನು ಏಕೆ ಸಂತೋಷ ಪಡುತಿದ್ದನು? [2]
2. ತಿರುಕನು ಕನಸು ಕಾಣುತ್ತಿದ್ದಾಗ ಏಕೆ ಹೆದರಿದನು? [2]
3. ತಿರುಕನು ಅರಸನಾಗಿ ಆಸ್ಥಾನದಲ್ಲಿ ಹೇಗೆ ಮೆರೆದನು ವಿವರಿಸಿ [3]
4. ' ತಿರುಕನು ಕನಸು' ಪದ್ಯ ಮಾನವನ ಜೀವನಕ್ಕೆ ಹೇಗೆ ಮಾದರಿಯಾಗಿದೆ ವಿವರಿಸಿ [3]

ನಾಟ್ಯಮಯೂರಿ - ಕಾದಂಬರಿ
NATYA MAYURI - NOVEL
[ಶ್ರೀ ಸಾ. ಶಿ. ಮರುಳಯ್ಯ]
Shri . sa. Shi. Marulayya

Question 11

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

ಶಾಂತಲೆ ಅರಮನೆಗೆ ಬಹುಬೇಗ ಹೊಂದಿಕೊಂಡಳು, ಅಲ್ಲಿಯವರು ಬೇರೆ ಎಂಬ ಭಾವನೆಯೇ ಅವಳಿಗೆ ಬರಲಿಲ್ಲ, ಎಲ್ಲರೂ ಅಪರಿಚಯಸ್ಥರೆ ಆಗಿದ್ದರು.

[ಭಾಗ – ೦೫]

**ಪ್ರಶ್ನೆಗಳು:-**

1. ರಾಜ ಮಾತೆಯವರಿಗೆ ಅಮಿತಾನಂದವಾಗಲು ಕಾರಣವೇನು? [2]
2. 'ಸವಂತಿಗಂಧವಾರಣೆ' ಯಾರು? ಈ ಹೆಸರು ಯಾರಿಗೆ ಸರಿ ಹೊಂದುತ್ತದೆ? [2]
3. "ನಾನು ಚಿಕ್ಕವಳು ಸೂರ್ಯನ ಎದುರಿನಲ್ಲಿ ಕಿರುಹಣತೆಗೇಕೆ ಪ್ರತಿಷ್ಠೆ?" ಸಂದರ್ಭದೊಡನೆ ವಿವರಿಸಿ [3]
4. ರಾಜವಾಡೆಯಲ್ಲಿ ನಡೆದ ಸಂಗೀತ ಗೋಷ್ಠಿಯನ್ನುವರ್ಣಿಸಿ [3]



Scanned by CamScanner

Question 12

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

ಹೊಯ್ಸಳ ಸಾಮ್ರಾಜ್ಯವು ದಿನದಿಂದ ದಿನಕ್ಕೆ ಏಳ್ಗೆಯನ್ನು ಹೊಂದತೊಡಗಿತು. ಈ ಪ್ರಗತಿಯನ್ನು ಕಂಡ ಉಳಿದ ರಾಜ್ಯದ ರಾಜರುಗಳಿಗೆ ಸಹಿಸಲಾಗಲಿಲ್ಲ

[ಭಾಗ – ೦೮]

**ಪ್ರಶ್ನೆಗಳು:-**

1. ದ್ವಾರಸಮುದ್ರದ ಸೇನೆ ತಲಕಾಡಿನ ಕಡೆಗೆ ಯಾವಾಗ ಜೈತ್ರಯಾತ್ರೆ ಹೊರಟಿತು? [2]
2. ಯಾರಹೆಸರಿನಲ್ಲಿ ಶಿಲಾಶಾಸನವನ್ನು ಸಾಕ್ಷೀಕರಿಸಿ ಬೇಕೆಂದು ನಿರ್ಧರಿಸಲಾಯಿತು? [2]
3. ತಲಕಾಡನ್ನು ಗೆದ್ದ ವಿಷ್ಣುವರ್ಧನ ತನ್ನ ಸೈನಿಕರಿಗೆ ಹೇಳಿದ್ದೇನು? ವಿವರಿಸಿ [3]
4. ದ್ವಾರಸಮುದ್ರ ದೇವಾಲಯ ನಿರ್ಮಾಣದಲ್ಲಿ ಕೇತಮಲ್ಲ ನಾಯಕರಿಗೆ ಯಾವ ರೀತಿಯ ಗೌರವಸಲ್ಲಿಸಲಾಯಿತು? [3]

Question 13

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

"ಒಳಗಿನ ಕಿಡಿ ಹೊರಗಿನ ದಳ್ಳುರಿಗಿಂತ ಹೆಚ್ಚು ಅಪಾಯಕಾರಿ"

[ಭಾಗ – ೧೦]

**ಪ್ರಶ್ನೆಗಳು:-**

1. ಈಮಾತನ್ನುಯಾರುಯಾರಿಗೆಹೇಳಿದರು? [2]
2. ಶಾಂತಲೆಗೆ ಸಿಡಿಲಂತೆ ಬಡಿದ ಘೋರ ಘಟನೆ ಯಾವುದು? [2]
3. ಶಾಂತಲೆಯು ವಿಷ್ಣುವರ್ಧನನ ಮುಂದೆ ಅಂತಃಪುರದಲ್ಲಿ ಬೇಡಿಕೊಂಡಿದ್ದೇನು? [3]
4. ಶಿವಗಂಗೆ ಬಂದ ವಿಷ್ಣು ಮತ್ತು ಡಣಾಯಕರು ಶಾಂತಲೆಯನ್ನು ನೋಡಿ ದುಃಖಿಸಿದ್ದೇಕೆ? [3]



Scanned by CamScanner

ಹೂವಿನಾಟಕ

HOOVI – DRAMA

ಹೆಚ್ . ಎಸ್ . ವೆಂಕಟೇಶ್ ಮೂರ್ತಿ

H. S. Venkatesh Murthy

Question 14

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

ಕಾಡು ಗುಡ್ಡದ ಹಾದಿ!
ಜೋಡೆತ್ತಿನಾಗಾಡಿ!
ಒಣಗೀದ ಮರವ ಅರಸುತ್ತಾ!!
ಬಂದೇವು ನಾವು!

**ಪ್ರಶ್ನೆಗಳು:-**

1. ರೈತಕಾಡಿನಲ್ಲಿಕಾಣುವಹೂಮರಮತ್ತುಬೇರೆಜಾತಿಯಮರಗಳುಯಾವುವು? [2]
2. ಬನದಮ್ಮರೈತರಿಗೆಹೇಗೆಆಧಾರವಾಗಿದ್ದಾಳೆ [2]
3. "ಆಕಾಶಹರುತಲೇಮೇಲೆಬಿದ್ದಹಾಗೆಯಾಕಣ್ಣಾ ----ಕೂಗ್ತಿ?" ಸಂದರ್ಭ ಸಹಿತ ವಿವರಿಸಿ [3]
4. ಹೂವಿಮನೆಯಲ್ಲಿ ಇಲ್ಲದ ಸಮಯದಲ್ಲಿ ಹೊನ್ನ ಮತ್ತು - ಬೆಳ್ಳಿ ನಡುವೆ ನಡೆದ

   ಮಾತುಕತೆಯನ್ನು ವಿವರಿಸಿ [3]

**Question 15**

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

ಗೌಡರ ಮಗ ಊರ ತುಂಬ ಡಂಗೂರ ಹೊಯ್ಸಿದಾನೆ ------ ಯಾವುದೋ ಹೂವಂತೆ ಆ ಹೂ –

ತಂದು ಕೊಟ್ಟೋರಿಗೆ ಹೂವಿಗೆ ಹತ್ತು ಹೊನ್ನು ಕೊಡ್ತಾನಂತೆ.



Scanned by CamScanner

ಪ್ರಶ್ನೆಗಳು:-

1. ಈಮೇಲೆ ಹೇಳಿದ ಮಾತಿನ ಸಂದರ್ಭವನ್ನು ತಿಳಿಸಿರಿ, ಆ ಮಾತನ್ನು ಯಾರು ಯಾರಿಗೆ ಹೇಳಿದರು [2]
2. ಹೂವಿ ತಾನೇ ಹೂ ಬಿಡುವ ಗಿಡ ಎಂದು ಒಪ್ಪಿ ಕೊಳ್ಳಲು ಕಾರಣವೇನು ? [2]
3. ಹೂಗಳು ಮರಗಳಲ್ಲಿ ಅರಳುವಾಗ ಮರವು ಹೇಗೆಲ್ಲ ಸಿದ್ಧಗೊಳ್ಳಬೇಕು ಎಂದು ಹಾಡಿನಲ್ಲಿ ವರ್ಣಿಸಿದ್ದಾರೆ [3]
4. ಹೂವಿನಗಿಡ ಮತ್ತೆ ಹೂವಿಯಾಗುವ ಬಗ್ಗೆ ವಿವರಿಸಿ [3]

**Question 16**

Read the extract given below and answer in **Kannada** the questions that follow: -

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ:-

ಏನಕ್ಕಾ . . . ಗಿಡಕ್ಕೆ ನೀರು ಹಾಕೋದಕ್ಕೆ ನೀನೇ ಬಂದಿದೀ ಈವತ್ತು. . .

ಪ್ರಶ್ನೆಗಳು:-

1. ಈ ಮಾತಿಗೆ ಬೆಳ್ಳಿಯ ಪ್ರತಿಕ್ರಿಯೆಯೇನು? [2]
2. ಬೆಳ್ಳಿ ತನ್ನಅಂಗೈಯನ್ನು ತೋರಿಸಿದಾಗ ಕುದುರೆ ಏನು ಹೇಳುತ್ತದೆ? ಅದಕ್ಕೆ ಬೆಳ್ಳಿಯ ಉತ್ತರವೇನು? [2]
3. "ಅನಿಷ್ಟಕ್ಕೆಲ್ಲಾ ಶನೀಶ್ವರ ಗುರಿ" ಸಂದರ್ಭಸಹಿತವಿವರಿಸಿ [3]
4. ಬೆಳ್ಳಿ ತನ್ನಅಣ್ಣಅತ್ತಿಗೆಯಮೇಲೆ ಕೋಪಗೊಳ್ಳಲು ಕಾರಣವೇನು ವಿವರಿಸಿ [3]



Scanned by CamScanner